ದಿನಾಂಕಃ 29-11-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ.

ನಿಪಿ 4 ರಲ್ಲಿ 1 ನೇ ಪ್ರತಿವಾದಿಯು ಒಂದೇ ಕಡೆ ತನ್ನ ಸಹಿಯನ್ನು ಮಾಡಿರುತ್ತಾನೆ. 1 ನೇ ಪುಟದಲ್ಲಿ ಸಹಿ ಮಾಡಿರುತ್ತಾರೆ. 1 ನೇ ಪ್ರತಿವಾದಿ ಬರೆದುಕೊಟ್ಟಿರುವ ಕರಾರು ಪತ್ರದಲ್ಲಿ ಮಾಲ್ಕಿ ಸರ್ವೆ ನಂಬರ 81 ಇತ್ತು. ಕರಾರು ಪತ್ರದಲ್ಲಿ ಗಿಡ ಮರಗಳ ಕ್ರಯಪತ್ರ, ಸೋಮಣ್ಣ ನಾಯ್ಕ ಗಣಪತಿ ಬಿಳ್ಳೆಕರ ಬರೆದುಕೊಟ್ಟಿರುವ ಬಗ್ಗೆ, ಹಾಗೂ ಕ್ರಯಪತ್ರದಲ್ಲಿ ಬರೆದಿರುವ ಗಿಡಮರಗಳನ್ನು ಕೊಡಲಿಕ್ಕೆ ನನಗೇನು ತೊಂದರೆ ಇಲ್ಲ ಹಾಗೂ ಅಂಡ್ವಾನ್ಸ 50 ಸಾವಿರ ರೂಗಳನ್ನು ನೀಡಿರುತ್ತಾರೆ. ಕಟಿಂಗ್ ಮಾಡುವ ಕಾಲಕ್ಕೆ ಏನು ತೊಂದರೆ ಮಾಡುವುದಿಲ್ಲ. ತೊಂದರೆ ಏನಾದರೂ ಆದರೆ ಅವರೆ ಜವಾಬ್ದಾರು ಎಂದು ಬರೆದಿರುತ್ತಾರೆ. ನಿಪಿ 4 ರಲ್ಲಿ ನಮೂದಾಗಿರುವ ಈ ಮೇಲೆ ಹೇಳಿರುವ ವಿಚಾರಗಳು ಈ ದಿನ ನನಗೆ ನೆನಪಿರುತ್ತವೆ. ನಿಪಿ 4 ನ್ನು ಬರೆದುಕೊಡುವ ಕಾಲಕ್ಕೆ ಯಾವುದೇ ಶರತ್ತುಗಳು ಇರಲಿಲ್ಲ. ನಿಪಿ 4 ನ್ನು ತಯಾರಿಸಲು ಛಾಪಾ ಕಾಗದಗಳನ್ನು ಯಾವ ತಾರೀಖಿಗೆ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ ಕಾರಣ ಛಾಪಾ ಕಾಗದಗಳನ್ನು 1 ನೇ ಪ್ರತಿವಾದಿಯರು ತೆಗೆದಿರುತ್ತಾರೆ. ಛಾಪಾ ಕಾಗದಗಳನ್ನು 1 ನೇ ಪ್ರತಿವಾದಿ ಖರೀದಿ ಮಾಡಿರುವ ಕುರಿತು ಛಾಪಾ ಕಾಗದ ಮೇಲೆ 1 ನೇ ಪ್ರತಿವಾದಿಯ ಹೆಸರು ನಮುದಾಗಿರುತ್ತದೆ. ಇದನ್ನು ಹೊರತುಪಡಿಸಿ 1 ನೇ ಪ್ರತಿವಾದಿ ಬೇರೇನು ಕಾಗದ ಪತ್ರಗಳನ್ನು ಬರೆದುಕೊಟ್ಟಿರುವುದಿಲ್ಲ.

ನಿಪಿ 4 ರಮೇಲೆ ಸಹಿಗಳನ್ನು ಹೊರತುಪಡಿಸಿ ಬೇರೆನು ಕೈಯಿಂದ ಬರೆದಿರುವ ಬಗ್ಗೆ ನಮುದಾಗಿರುವುದಿಲ್ಲ. ನಿಪಿ 4 ನ್ನು ಸಾಕ್ಷಿಗೆ ತೋರಿಸಲಾಯಿತು 1 ನೇ ಪುಟದಲ್ಲಿ 1 ನೇ ಪ್ಯಾರಾದಲ್ಲಿ 7 ನೇ ಲೈನ್‌ನಲ್ಲಿ ಕೈಯಲ್ಲಿ ಬರೆದಿರುತ್ತದೆ ಸದರಿ ಭಾಗವನ್ನು ಸಾಕ್ಷಿಗೆ ತೋರಿಸಲಾಯಿತು ಅದರ ಬಗ್ಗೆ ನನಗೇ ಮಾಹಿತಿ ಇಲ್ಲವೆಂದು ತಿಳಿಸಿರುತ್ತಾರೆ. ನಿಪಿ 4 ರಲ್ಲಿ ನಿಖರವಾಗಿ, ಎಷ್ಟು ಮರಗಳು ಮಾರಾಟ ಮಾಡಿರುವ ಬಗ್ಗೆ ಬರೆದಿರುತ್ತದೆ, ಅವುಗಳು 365 ಮರಗಳಾಗಿರುತ್ತವೆ. ಅವುಗಳು ಸಂಪೂರ್ಣವಾಗಿ ಜಂಗ್ಲಿ ಮರಗಳು ಎಂದು ಬರೆದಿರುತ್ತದೆ.

ಅರಣ್ಯ ಇಲಾಖೆದವರಿಗೆ ನಾನು ದಾವಾ ಆಸ್ತಿಯಲ್ಲಿರುವ ಜಂಗ್ಲಿ ಮರಗಳನ್ನು ಕಡಿಯುವ ಬಗ್ಗೆ ಅನುಮತಿ ಪಡೆಯಲು ಅರ್ಜಿಯನ್ನು ನೀಡಿರುತ್ತೇನೆ ಸದರಿ ಅರ್ಜಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

**(ಸಾಕ್ಷಿಯು ಕೈಯಲ್ಲಿ ಬರೆದುಕೊಂಡ ಬಂದು ಸಾಕ್ಷಿಯನ್ನು ನೋಡಿ ಕೊಂಡು ಹೇಳುತ್ತಿದ್ದರಿಂದ ಹಾಗೂ ಸಾಕ್ಷಿಯು ನ್ಯಾಯಾಲಯದ ಸಮಯವನ್ನು ಹಾಳುಮಾಡುತ್ತಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.

ದಿನಾಂಕಃ 14-09-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ.

ದಾವೆಯನ್ನು ಮಾಡಲು ನನಗೆ ವಕೀಲರು ಮಾಹಿತಿಯನ್ನು ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಗೂ ಮತ್ತು ನನಗೂ ಸಂಬಂದವಿರುತ್ತದೆ. 1 ನೇ ಪ್ರತಿವಾದಿ ನನಗೆ ಕರಾರು

ಪತ್ರವನ್ನು 1997 ರಲ್ಲಿ ಮಾಡಿಕೊಟ್ಟಿರುತ್ತಾರೆ. ನಾನು ಮೂಲತಃ ಅಂಕೋಲಾ ತಾಲ್ಲೂಕಿನ ಬೆಳ್ಳಿಕೇರಿ ಗ್ರಾಮದವನು. 1 ನೇ ಪ್ರತಿವಾದಿಯ ನನಗೆ 1997 ರಿಂದ ಪರಿಚಯ ಇರುತ್ತಾರೆ. 1 ನೇ ಪ್ರತಿವಾದಿಯು 1997 ನೇ ಇಸ್ವಿಯಲ್ಲಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಆದರೆ ಅದು ಯಾವ ತಿಂಗಳು ಮತ್ತು ತಾರೀಖು ಎಂದು ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಕರಾರು ಪತ್ರವನ್ನು ರೂ. 500-00 ಅಥವಾ ರೂ. 200-00 ಛಾಪಾ ಕಾಗದಲ್ಲಿ ಬರೆದಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಛಾಪಾ ಕಾಗದವನ್ನು 1 ನೇ ಪ್ರತಿವಾದಿಯು ತನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ನಿಪಿ 4 ಅಂಗ್ಲಭಾಷೆಯಲ್ಲಿ ಇರುವುದರಿಂದ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 4 ರಲ್ಲಿ ಬೆರಳಚ್ಚು ಆಗಿರುವ ಬಣ್ಣ ಹಾಗೂ 3 ನೇ ಸಾಕ್ಷಿಯ ಹೆಸರು ಮತ್ತು ವಿಳಾಸ ಬೆರಳಚ್ಚಾಗಿರುವ ಇಂಕಿನ ಬಣ್ಣ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ಎಲ್ಲಾ ನಿಪಿ 4 ರಲ್ಲಿರುವ ಬೆರಳಚ್ಚು ಒಂದೇ ಬಣ್ಣದಲ್ಲಿದೆಂದು ಸಾಕ್ಷಿಯು ನುಡಿದಿರುತ್ತಾರೆ.

ಸದರಿ ಭಾಗವನ್ನು ಈ ನ್ಯಾಯಾಲಯವು ನೋಡಿ ನಿಪಿ 4 ರಲ್ಲಿರುವ ಇರುವ 3 ನೇ ಸಾಕ್ಷಿಯು ಹೆಸರು ಮತ್ತು ವಿಳಾಸವು ಬೇರೆ ಬಣ್ಣದಲ್ಲಿ ಮುದ್ರಣ ಆಗಿದೆಂದು ಕಂಡು ಬಂದಿದ್ದರಿಂದ ಸದರಿ ಭಾಗವನ್ನು ನಿಪಿ 4-ಎ ಎಂದು ಗುರುತಿಸಲಾಯಿತು.

ನಿಪಿ 4 ರಲ್ಲಿ 1 ಹಾಗೂ 2 ನೇ ಸಾಕ್ಷಿಯ ಹೆಸರು ಮತ್ತು ವಿಳಾಸವು ಒಂದೆ ಸಮನಾಗಿ ಬೆರಳಚ್ಚಾಗಿರುತ್ತದೆ ಹಾಗೂ 3 ನೇ ಸಾಕ್ಷಿಯ ಹೆಸರು ಮತ್ತು ವಿಳಾಸವು ಬೇರೆ ರೀತಿಯಲ್ಲಿ ಬೆರಳಚ್ಚು ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 4 ಕ್ಕೆ ಸಾಕ್ಷಿಗಳು ಯಾರೆಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಗೋವಿಂದ ಜಾನು ನಾಯ್ಕರವರಿಗೆ ಗೊತ್ತಿರುತ್ತದೆ ಎಂದು ನುಡಿದಿದರುತ್ತಾರೆ. ಗೋವಿಂದ ಜಾನು ನಾಯ್ಕ ರವರು ಸಾಕ್ಷಿಯಾಗಿ ಸಹಿಯನ್ನು ಮಾಡಿರುತ್ತಾರೆ ಸದರಿ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 4-ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನ್ಯಾಯಲಯದಲ್ಲಿ ಮಾಡಿರುತ್ತಾರೆ. ನಿಪಿ 4-ಬಿ ಹಾಗೂ ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಜನರನರಲ್ ಪಾವರ ಆಫ್ ಅಟಾರ್ನಿಯಲ್ಲಿರುವ ಸಹಿಯು ಒಬ್ಬರೇ ಮಾಡಿರುವ ಸಹಿಯಾಗಿರುತ್ತದೆ. ನಿಪಿ 4 ರಲ್ಲಿ ನಾನು ಒಂದು ಅಥವಾ 2 ಸಹಿಯನ್ನು ಮಾಡಿರುತ್ತೇನೆ. ನಿಪಿ 4 ರಲ್ಲಿ 218 ಮರಗಳ ಬಗ್ಗೆ ಬರೆದಿರುತ್ತದೆ. 1 ನೇ ಪ್ರತಿವಾದಿಯರು ನಿಪಿ 4 ರಲ್ಲಿ 2 ಕಡೆ ತನ್ನ ಸಹಿಯನ್ನು ಮಾಡಿರುತ್ತಾರೆ. 1 ನೇ ಪ್ರತಿವಾದಿಯು ಕರಾರು ಮಾಡಿಕೊಟ್ಟಿದು ಅದು 3 ಪುಟಗಳದ್ದಾಗಿರುತ್ತದೆ. 1 ನೇ ಪ್ರತಿವಾದಿಯ ಪ್ರತಿವಾದ ಪತ್ರದಲ್ಲಿ ಇರುವ ಸಹಿ ಅಂಗ್ಲ ಭಾಷೆಯಲ್ಲಿ ಇರುವುದರಿಂದ ಅದು ಯಾರ ಸಹಿ ಎಂದು ನನಗೆ

ಗೊತ್ತಿರುವುದಿಲ್ಲ. ನಿಪಿ 4-ಎ 1 ನೇ ಪ್ರತಿವಾದಿಯ ಸಹಿಯಾಗಿರುತ್ತದೆ. ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿಯು ಎನ್ನುವ ಜಾಗದಲ್ಲಿ ಇರುವ ಸಹಿ ಹಾಗೂ ನಿಪಿ 4-ಎ ರಲ್ಲಿರುವ ಸಹಿ ಬಿನ್ನವಾಗಿರುತ್ತದೆ ಎಂದರೆ ಸರಿ. ನಿಪಿ 4-ಎ 1 ನೇ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.